This Question Paper consists of 31 questions 8 printed pages.
ಈ ಪ್ರಶ್ನೆಪತ್ರಿಕೆಯಲ್ಲಿ 31 ಪ್ರಶ್ನೆಗಳಿದ್ದು 8 ಮುದ್ರಿತ ಪುಟಗಳನ್ನು ಹೊಂದಿದೆ.

Roll No.
ರೋಲ್ ನಂ.

| | | | | | | | | | | | |
|---|---|---|---|---|---|---|---|---|---|---|---|
| | | | | | | | | | | | |

**Code No.** **63/S/A/K**
**ಕೋಡ್ ನಂ.**

**Set / ಸೆಟ್** **A**

# KANNADA
# ಕನ್ನಡ
# (208)

Day and Date of Examination ..........
(ಪರೀಕ್ಷೆಯ ದಿನ ಮತ್ತು ತಾರೀಖು)

Signature of Invigilators 1. ..........
(ಉಸ್ತುವಾರಿದಾರರ ರುಜು)

2. ..........

**ಸಾಮಾನ್ಯ ಸೂಚನೆಗಳು :**

1. ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.
2. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿವೆಯೇ ಎಂದು ಪರೀಕ್ಷಿಸಿ. ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದು ಪರೀಕ್ಷಿಸಿ.
3. ವಸ್ತುನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C) ಮತ್ತು (D)ಯನ್ನು ಬರೆಯಬೇಕು.
4. ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.
5. ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್‌ಅನ್ನು ಬರೆಯಕೂಡದು. ಒಂದುವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನೂರ್ಜಿತಗೊಳಿಸಲಾಗುವುದು.
6. ನಿಮ್ಮ ಪ್ರಶ್ನೆಪತ್ರಿಕೆಯ ಕೋಡ್ ನಂಬರ್ 63/S/A/K ಸೆಟ್ A ಉತ್ತರ ಪತ್ರಿಕೆಯಲ್ಲಿ ಬರೆಯಿರಿ.

# KANNADA

## ಕನ್ನಡ

## (208)

ಸಮಯ : 3 ಗಂಟೆಗಳು ] [ ಗರಿಷ್ಠ ಅಂಕಗಳು : 100

**ಸೂಚನೆಗಳು:** (i) ಎಲ್ಲಾ ಪ್ರಶ್ನೆಗಳಿಗೂ ಉತ್ತರಗಳನ್ನು ಉತ್ತರ ಪುಸ್ತಕದಲ್ಲೇ ಬರೆಯಿರಿ.

(ii) ಪ್ರಶ್ನೆ ಮತ್ತು ಉಪ-ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

(iii) ಪ್ರಶ್ನೆ 1ರಿಂದ 11ರ ವರೆಗೆ 4 ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಅತ್ಯಂತ ಸೂಕ್ತವಾದುದನ್ನು ಆಯ್ಕೆಮಾಡಿ ಉತ್ತರಿಸಿರಿ.

**1.** 'ತಲಾಸು' - ಈ ಪದದ ಅರ್ಥ ______ 1

(A) ಕಳೆದುಕೋ (B) ಮುಳುಗು

(C) ಹುಡುಕು (D) ಒಂದಾಗು

**2.** ನಂಬಿಗ್ಯಾಗ ಸೆಲೀತನದ ______ ಎಲ್ಲಾ. 1

(A) ಜನ (B) ಬಲ

(C) ಜಗ (D) ನೆಲ

**3.** ಶಾಲುಸಾಬಿ ಊರಿನ ಒಬ್ಬ______. 1

(A) ಪಂಡಿತ (B) ನರಾವತಾರ

(C) ನಾಯಕ (D) ಪಾಳೆಗಾರ

**4.** ಸಕ್ಕರೆ ಕಾಯಿಲೆ ಒಂದು ______ ಕಾಯಿಲೆ. 1

(A) ನೈತಿಕ (B) ಜೈವಿಕ

(C) ಪೈದಿತ (D) ಆರ್ಥಿಕ

**5.** ಸ್ತುತಿ-ನಿಂದೆಗಳು ಬಂದಡೆ ಮನದಲ್ಲಿ______ ತಾಳದೆ. 1

(A) ಕೋಪವ (B) ತಾಪವ

(C) ಸಂತಸವ (D) ದ್ವೇಷವ

**6.** ನೀಲೇಗೌಡನ ತಂದೆಯ ಹೆಸರು ______. 1

(A) ಜುಂಜಯ್ಯ (B) ಜುಂಜೇಗೌಡ

(C) ಚೋಳರಾಜ (D) ಬಲ್ಲಯ್ಯ

**7.** ವೈಚಾರಿಕ ಪ್ರಜ್ಞೆಯ ಅಭಾವಕ್ಕೆ ಬಲವಾದ ಅಡ್ಡಿ ______. 1

(A) ಜೀವನ (B) ಮನಸ್ಸಿನ ದುರ್ಬಲತೆ

(C) ಆತ್ಮವಿಶ್ವಾಸ (D) ಮಾನಸಿಕತೆ

**8.** ನೆಲೆಯನರಿತು ನೀ ನೆನೆ ಕಂಡ್ಯ ______. 1

(A) ಮನುಜ (B) ಲೋಕವ

(C) ಮನೆಯ (D) ಜಾತಿಯ

**9.** 'ಚರಕ' ಬಡಕೂಲಿ ಹೆಣ್ಣುಮಕ್ಕಳ ಪಾಲಿಗೆ ______. 1

(A) ಭಾಗ್ಯಚಕ್ರ (B) ವಿಷ್ಣುಚಕ್ರ

(C) ಅನಿಷ್ಟ ಚಕ್ರ (D) ಶುಕ್ರದೆಸೆ

**10.** ಶಿಸ್ತಿನ ಸಿಪಾಯಿಗಳೆಂದರೆ ______. 1

(A) ದಾರಿಹೋಕರು (B) ನಾಗರಿಕರು

(C) ಕೆಲಸಗಾರರು (D) ಮುದುಕರು

**11.** ಆಚಾರಕರಸಾಗು ______ ಪ್ರಭುವಾಗು. 1

(A) ದೇಶಕ್ಕೆ (B) ಜನಕ್ಕೆ

(C) ನೀತಿಗೆ (D) ನಾಡಿಗೆ

**12.** ಕೊಟ್ಟ ಗದ್ಯಭಾಗವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ :

ಪುಟ್ಟದೊಂದು ಊರು. ಊರ ಹೊರಗೆ ಒಂದು ಹಳ್ಳ ಹರಿದಿದೆ. ಹಳ್ಳ ಅಲ್ಲಿ ಹರಿದು ಹರಿದು ಊರ ಜನರನ್ನು ಪೋಷಿಸುತ್ತಿದೆ. ಹರಿವ ಹಳ್ಳದಿಂದ ಊರು ಸುಂದರವಾಗಿ ಕಾಣಿಸುತ್ತಿದೆ. ಇಂತಹ ಸುಂದರವಾದ ಊರು. ಆ ಊರಿನ ಸುತ್ತಲೂ ಹಸಿರು ಗಿಡ-ಮರಗಳು ಸುತ್ತುವರೆದಿವೆ. ಆ ಊರಿನಲ್ಲಿ ಒಂದು ಮನೆ. ಆ ಮನೆಯಲ್ಲಿ ಒಬ್ಬ ಯುವಕನಿದ್ದ. ಅವನು ಒಬ್ಬನೇ ಜೀವನ ಸಾಗಿಸುತ್ತಿದ್ದ. ಒಮ್ಮೆ ಕಾಡಿನಿಂದ ಒಂದು ಜಿಂಕೆ ಹುಲಿಯ ಭಯದಿಂದ ಓಡಿ ತಪ್ಪಿಸಿಕೊಳ್ಳುತ್ತ ಆ ಯುವಕನ ಮನೆ ಪ್ರವೇಶಿಸಿತು. ಹುಲಿಯೂ ಅದರ ಹಿಂದೆ ಬಂದು ನನ್ನ ಬೇಟೆಯನ್ನು ಒಪ್ಪಿಸು ಎಂದು ಹೇಳಿತು. ಆ ಜಿಂಕೆ ಯುವಕನನ್ನು ರಕ್ಷಿಸು ಎಂದು ಬೇಡಿಕೊಂಡಿತು. ಆ ಯುವಕ ನನ್ನ ಪ್ರಾಣವನ್ನು ಕೊಟ್ಟಾದರೂ ನಿನ್ನನ್ನು ಉಳಿಸುವೆ ಎಂದನು. ಯುವಕ ಹಾಗೂ ಹುಲಿಯ ಮಧ್ಯೆ ಘೋರ ಯುದ್ಧ ನಡೆಯಿತು. ಆ

ಯುವಕ ಹುಲಿಯನ್ನು ತನ್ನ ಶಕ್ತಿಯನ್ನು ಬಳಸಿ ಓಡಿಸಿದನು. ಆಗ ಜಿಂಕೆ ಮತ್ತು ಯುವಕನ ಮಧ್ಯೆ ಸ್ನೇಹವಾಯಿತು.

**ಪ್ರಶ್ನೆಗಳು :**

(ಕ) ಊರ ಹೊರಗೆ ಏನು ಹರಿದಿದೆ? 1

(A) ಹಳ್ಳ (B) ನದಿ

(C) ಕೆರೆ (D) ಸಾಗರ

(ಖ) ಹಳ್ಳ ಹರಿದು ________ ಪೋಷಿಸಿದೆ. 1

(A) ಊರನ್ನು (B) ಜನರನ್ನು

(C) ಪ್ರಾಣಿಗಳನ್ನು (D) ಮರಗಳನ್ನು

(ಗ) ಹರಿವ ಹಳ್ಳದಿಂದ ಊರು ಹೇಗೆ ಕಾಣಿಸುತ್ತಿದೆ? 1

(ಘ) ಊರಿನ ದೃಶ್ಯವನ್ನು ವರ್ಣಿಸಿ. 2

(ಙ) ಊರಿನೊಂದು ಮನೆಯಲ್ಲಿ ಯಾರಿದ್ದರು? ಅವನು ಏನು ಮಾಡುತ್ತಿದ್ದನು? 2

(ಚ) 'ಪೋಷಿಸು' ಈ ಪದದ ಸಮಾನಾರ್ಥಕ ಪದವೇನು? 1

(ಛ) ಕಾಡಿನಿಂದ ಬಂದ ಜಿಂಕೆ ಯಾರ ಮನೆಯನ್ನು ಪ್ರವೇಶಿಸಿತು? 2

(ಜ) ಯುವಕ ಮತ್ತು ಹುಲಿಯ ಮಧ್ಯೆ ಏನು ನಡೆಯಿತು? 2

(ಝ) ಯಾರ ಮಧ್ಯೆ ಸ್ನೇಹವಾಯಿತು? 1

**13.** ಕೊಟ್ಟಿರುವ ಪದ್ಯವನ್ನು ಓದಿ, ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ :

ಬೊಡ್ಡೆ ಕರಿದು ಎಲೆ ಹಸಿರು
ಹೂವು ನಾನಾ ತರತರ
ಎಂಥ ಸೊಗಸು ಏನು ಕಂಪು
ಬೆಳೆದು ನಿಂತ ಗಿಡ–ಮರ

ಯಾರೇ ಬಂದು ಏನೇ ಮಾಡಲಿ
ಎಲ್ಲದಕ್ಕೂ ದಿವ್ಯ ಮೌನ
ರೆಂಬೆ–ಕೊಂಬೆ ಚಿಗುರುವಲ್ಲಿ
ಕಡಲುಕ್ಕುವ ಚೇತನ

ಮನುಷ್ಯನಲ್ಲಿ ಮಾತು ಉಂಟು
ಮಾತಿನಂತೆ ಇಲ್ಲ ಮನ

ಲಿಂಗ ವರ್ಣ ಜಾತಿ ಧರ್ಮ
ಹಾಳು ಕೊಂಪೆ ಇವನ ಮನ

ಜಾತಿ–ಗೀತಿ, ಲಿಂಗ ಧರ್ಮ
ಮೀರಿ ಬೆಳೆದ ಗಿಡ–ಮರ
ಅವನು ಇವಳು ಅದು ಇದು
ಎಣಿಸುತಿಲ್ಲ ಒಂದು ದಿನ

**ಪ್ರಶ್ನೆಗಳು :**

(ಕ) ಎಲೆಯ ಬಣ್ಣ ಯಾವುದು? 1

(A) ಕೆಂಪು (B) ಹಳದಿ

(C) ಹಸಿರು (D) ಕಂದು

(ಖ) ಮನುಷ್ಯನಲ್ಲಿ ಮಾತು ಉಂಟು
'ಮನುಷ್ಯನಲ್ಲಿ' – ಇದು ಯಾವ ವಿಭಕ್ತಿ? 1

(ಗ) ಗಿಡ–ಮರಗಳಿಂದ ಆಗುವ ಲಾಭವೇನು? ಒಂದೆರಡು ವಾಕ್ಯಗಳಲ್ಲಿ ಬರೆಯಿರಿ. 2

(ಘ) 'ತರತರ' ಈ ಮಾತಿನ ದ್ವಿರುಕ್ತಿಯಂತೆ ಇನ್ನೆರಡು ದ್ವಿರುಕ್ತಿಗಳನ್ನು ಬರೆಯಿರಿ. 2

**14.** ಕಥಾನಾಯಕನು ಮನೆ ಬಿಟ್ಟು ಹೊರಗೆ ಹೋಗಲು ಕಾರಣವೇನು? 1

**15.** ಜ್ಯುಳ ಸ್ನೇಹಿತರು ಇಂಟರ್‌ನೆಟ್‌ನಲ್ಲಿ ಕೇಳಿದ ಪ್ರಶ್ನೆ ಯಾವುದು? 1

**16.** ಕವಿ ಸಿದ್ದಲಿಂಗಯ್ಯ ಬಳಸಿರುವ ಎರಡು ಗ್ರಾಮ್ಯ ಪದಗಳನ್ನು ಬರೆಯಿರಿ. 1

**17.** ಹ್ಯುಯೆನ್–ತ್ಸಾಂಗ್ ಎಷ್ಟನೇ ವಯಸ್ಸಿನಲ್ಲಿ ಬೌದ್ಧ ಮತಾವಲಂಬಿಯಾದನು? 1

**18.** (ಕ) ಪ್ರೀತಿ ಯಾವುದರಂತೆ ಪ್ರಿಯವಾಗಿದೆ? 1

(ಖ) ಮಂಡೋದರಿ, ರಾವಣ, ವಿಭೀಷಣ, ಸೀತೆ –
ಇಲ್ಲಿ ಗುಂಪಿಗೆ ಸೇರದ ಪದ ________ 1

**19.** ಕೆಳಗಿನವುಗಳಿಗೆ ಉತ್ತರಿಸಿರಿ :

(ಕ) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಬಿಡಿಸಿ ಬರೆಯಿರಿ : 2

*(i)* ದೇವಾಲಯ

*(ii)* ಮಹೋತ್ಸವ

*(iii)* ವಿಕ್ರಮಾರ್ಜುನ

ಅಥವಾ

'ವಂತೆ' ಪ್ರತ್ಯಯ ಸೇರಿಸಿ ಎರಡು ಶಬ್ದ ಮಾಡಿರಿ.

(ಖ) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಕೂಡಿಸಿ ಬರೆಯಿರಿ : 2

*(i)* ಗುರು + ಉಪದೇಶ

*(ii)* ಎರಡು + ಮಡಿ

*(iii)* ಚಂದ್ರ + ಉದಯ

ಅಥವಾ

'ಅಲ್ಲಿ' ಪ್ರತ್ಯಯಕ್ಕೆ ಸಂಬಂಧಿಸಿದಂತೆ ಎರಡು ಶಬ್ದ ಬರೆಯಿರಿ.

(ಗ) ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದಿರುವ ಶಬ್ದಕ್ಕೆ ಸಮಾನಾರ್ಥಕ ಪದ ಬರೆಯಿರಿ : 2

*(i)* ಕರ್ತವ್ಯಕ್ಕೆ ಮಿಗಿಲಾದುದು ಯಾವುದೂ ಇಲ್ಲ.

*(ii)* ನಾವು ಕಂಡ ಕನಸುಗಳನ್ನು ನನಸಾಗ ಮಾಡಬೇಕು.

ಅಥವಾ

ಕೆಳಗೆ ಕೊಟ್ಟಿರುವ ಶಬ್ದಗಳಲ್ಲಿ ಯಾವುದಾದರೂ ಎರಡಕ್ಕೆ ಒಂದೊಂದು ವಿರುದ್ಧ ಪದ ಬರೆಯಿರಿ :

*(i)* ರಕ್ಷಕ

*(ii)* ಅಶಾಂತ

*(iii)* ಜ್ಞಾತ

**20.** ಕೆಳಗೆ ಕೊಟ್ಟಿರುವ ನುಡಿಗಟ್ಟುಗಳಲ್ಲಿ ಯಾವುದಾದರೂ ಎರಡನ್ನು ನಿಮ್ಮ ವಾಕ್ಯಗಳಲ್ಲಿ ಬರೆಯಿರಿ : 2

(ಕ) ಮನೆಮಂದಿ

(ಖ) ಬೆಕ್ಕಸ ಬೆರಗಾಗು

(ಗ) ಹುಲುಕಡ್ಡಿ

**21.** 'ವನೌಷಧ' ಈ ಪದವು ಯಾವ ಸಂಧಿಯ ನಿಯಮದಲ್ಲಿ ಬರುತ್ತದೆ? 1

**22.** ಗೃಹಸ್ಥರಿಗೆ ಲೇಖಕರು ಬರೆದ ಪತ್ರದ ಸಾರಾಂಶವೇನು? 4

**23.** 'ಭರತಭೂಮಿ ನನ್ನ ತಾಯಿ' ಈ ಪದ್ಯದ ಭಾಷಾ ಶೈಲಿಯನ್ನು ಕುರಿತು ಬರೆಯಿರಿ. 5

**24.** ಮರಕುಟುಕವನ್ನು ನೋಡಿದ ಅವರ ಮನಸ್ಸಿನಲ್ಲಿ ಅನಿಸಿದ್ದೇನು? 5

ಅಥವಾ

ರಾಜನ ಮಗ 'ವಾದ್ಯ ನಿಲ್ಲುಸ್ರಪ್ಪ' ಎಂದು ಏಕೆ ಹೇಳಿದನು?

**25.** ಕೊಟ್ಟಿರುವ ಪದಗಳಲ್ಲಿ ಯಾವುದಾದರೂ ಎರಡಕ್ಕೆ ಎರಡು ಶಬ್ದಗಳನ್ನು ಬಳಸಿಕೊಂಡು ಅರ್ಥಪೂರ್ಣವಾಗಿ ನಿಮ್ಮ ವಾಕ್ಯಗಳಲ್ಲಿ ಪ್ರಯೋಗಿಸಿರಿ : 2+2=4

(ಕ) ಹೊರಗೆ–ಒಳಗೆ

(ಖ) ದಿಕ್ಕು–ದೆಸೆ

(ಗ) ಅಕ್ಕ–ಪಕ್ಕ

**26.** ಜೆ.ಎಸ್.ಎಸ್. ಪ್ರೌಢಶಾಲೆ, ನಾಗತಿಹಳ್ಳಿ, ಜೆ.ಪಿ. ನಗರ, ಮೈಸೂರು ಇಲ್ಲಿನ 10ನೇ ತರಗತಿಯಲ್ಲಿ ವ್ಯಾಸಂಗ ಮಾಡಲು ರಾಜ್ಯಾದ್ಯಂತ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆಯ ಸಹಾಯದಿಂದ ದಂಡಚಿತ್ರವನ್ನು ರಚಿಸಿರಿ : 5

| ವರ್ಷ | 2000 | 2001 | 2002 | 2003 | 2004 | 2005 |
|---|---|---|---|---|---|---|
| ಮೇ ತಿಂಗಳ ದಾಖಲಾತಿ | 60 | 403 | 439 | 755 | 1500 | 2550 |
| ನವೆಂಬರ್ ತಿಂಗಳ ದಾಖಲಾತಿ | 141 | 340 | 725 | 950 | 2300 | 2965 |

ಅಥವಾ

ಮಾಹಿತಿ ಪತ್ರ

ನೀವು ಶ್ರೀಧರ ಎಂದು ಭಾವಿಸಿ, ನಿರ್ದೇಶಕರು, ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರನ್ನು ಪತ್ರದ ಮುಖಾಂತರ ಸಂಪರ್ಕಿಸಿ ಇಲಾಖೆಯ ಮಾಹಿತಿಯನ್ನು ಕೇಳಿ ಪಡೆಯಿರಿ.

ಗೆ,

..............................

..............................

..............................

ಮಾನ್ಯರೆ,

ವಿಷಯ :

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿ ..............................................................................

..............................................................................

..............................................................................

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ರುಜು

(ಹೆಸರು)

**27.** ಬೇಂದ್ರೆಯವರು ನಂಬಿಕೆಯ ಮಹತ್ವವನ್ನು ಹೇಗೆ ಚಿತ್ರಿಸಿದ್ದಾರೆ? ವಿವರಿಸಿ. 5

**28.** ಕೆಳಗಿನ ವಾಕ್ಯಗಳನ್ನು ಓದಿ, ಸೂಚಿಸಿರುವಂತೆ ಬರೆಯಿರಿ : 1×5=5

(ಕ) ಬಾಳಿನಲಿ ನಬಿಕೆ ಮುಖ ಎನುವುದನು ಕಲಿತವು.
(ಶುದ್ಧರೂಪದಲ್ಲಿ ಬರೆಯಿರಿ)

(ಖ) ಶಿಕ್ಷಕರು ಪಾಠ ಮಾಡುವರು : ಶಿಕ್ಷಕರು ಇದರ ಏಕವಚನ ರೂಪ ________

(ಗ) ರಾತ್ರಿ–ಹಗಲು : ಜೋಡಿ ಪದ : : ಸರಸರ : ________

(ಘ) ಅಬ್ಬಾ ಎಂಥ ಸೊಗಸಾದ ಹಾಡು
(ಇಲ್ಲಿ ಇರಬೇಕಾದ ಲೇಖನ ಚಿಹ್ನೆಗಳು)

(ಙ) ಅವನು ಚೆನ್ನಾಗಿ ಊಟ ಮಾಡಿದನು.
(ಇದನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ)

**29.** ನೀವು ರಮೇಶ/ರಾಗಿಣಿ, ಏಕಲವ್ಯ ವಸತಿ ಶಾಲೆ, ಗುಂಡ್ಲುಪೇಟೆ ಇಲ್ಲಿ ವ್ಯಾಸಂಗ ಮಾಡುತ್ತಿರುವಿರಿ ಎಂದು ಭಾವಿಸಿ 'ಕನ್ನಡ ನಿಘಂಟು'ವಿನ 5 ಪ್ರತಿಗಳನ್ನು ಕಳುಹಿಸಿಕೊಡಬೇಕೆಂದು ಕೋರಿ ಕಾರ್ಯದರ್ಶಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು ಇವರಿಗೆ ಒಂದು ಪತ್ರ ಬರೆಯಿರಿ. 7

ಅಥವಾ

ತುಮಕೂರಿನಲ್ಲಿರುವ ಸರ್ಕಾರಿ ಶಾಲೆಯೊಂದರಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ದಿನೇಶ/ಕೃತಿ ಎಂದು ಭಾವಿಸಿ ಮಡಿಕೇರಿಯಲ್ಲಿ ವಾಸಿಸುತ್ತಿರುವ ನಿಮ್ಮ ಗೆಳೆಯ/ಗೆಳತಿ ಕವೀಶ/ಕವಿತಾ ಇವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರುತ್ತಾ ಒಂದು ಪತ್ರ ಬರೆಯಿರಿ.

**30.** ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಕುರಿತು 50 ಶಬ್ದಗಳಿಗೆ ಮೀರದಂತೆ ಬರೆಯಿರಿ : 5

(ಕ) ದುಡಿಮೆಯೇ ದೇವರು

(ಖ) ತುಂಬಿದ ಕೊಡ ತುಳುಕುವುದಿಲ್ಲ

(ಗ) ಹಿತ್ತಲಗಿಡ ಮದ್ದಲ್ಲ

**31.** ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು 200 ಶಬ್ದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ: 10

(ಕ) ಸ್ವಚ್ಛ ಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ

(ಖ) ಜಾತೀಯತೆ – ದೇಶದ ಪ್ರಗತಿಗೆ ಮಾರಕ

(ಗ) ವಿದ್ಯಾರ್ಥಿಗಳು ಮಾಡಬಹುದಾದ ಸಮಾಜಸೇವೆ

★ ★ ★